ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

ಸಿ.ಸಿ. ನಂ. 344/2014

ಸಾಕ್ಷಿಗೆ ದಿನಾಂಕ 13.2.2024 ರಂದು ಪ್ರಮಾಣವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು	:	ವಿ.ಶ್ರೀನಿವಾಸಮೂರ್ತಿ	ಪಿ.ಡಬ್ಲ್ಯೂ-1
ತಂದೆಯ/ಗಂಡನ ಹೆಸರು	:	ಲೇಟ್ ಪಿ.ಕೆ.ವೆಂಕಟರಮಣಯ್ಯ	ಸಿ.ಡಬ್ಲ್ಯೂ-1
ವಯಸ್ಸು	:	68	
ಉದ್ಯೋಗ	:	ನಿವೃತ್ತ ಸಹಕಾರ ಸಂಘದ ಸಹಾಯಕ ನಿಬಂಧಕರು	
ವಾಸಸ್ಥಳ	:	ಶ್ರೀರಂಗಪಟ್ಟಣ	

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ಹೆಚ್.ಡಿ.ಕೋಟೆಯ ಸಹಕಾರ ಇಲಾಖೆಯಲ್ಲಿ ಸಹಕಾರಿ ಅಭಿವೃದ್ದಿ ಅಧಿಕಾರಿಯಾಗಿ ಆಗಸ್ಟ್ 2011 ರಿಂದ ಜೂನ್ 2014 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 29.9.2011 ರಂದು ಹೆಚ್.ಡಿ.ಕೋಟೆಯ ಲ್ಯಾಂಪ್ಸ ಸಹಕಾರ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ವರ್ಗದವರ ವಿರುದ್ದ ಹಣ ದುರುಪಯೋಗವಾಗಿರುವ ಹಾಗೂ ಸ್ಟಾಕ್ ಕೊರತೆ ಮತ್ತು ಕಾರ್ಯಕಾರಿ ಮಂಡಳಿಯವರು ಮಾರಾಟ ದರವನ್ನು ನಿಗದಿಪಡಿಸಿದ್ದ ಕಡಿಮೆ ದರಕ್ಕೆ ಗೊಂದು, ಜೇನುತುಪ್ಪ ಹಾಗೂ ಮರದ ಪಾಚಿಯನ್ನು ಮಾರಾಟ ಮಾಡಿ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸಹಕಾರ ಸಂಘಗಳ ಸಹಾಯಕ ಉಪನಿಬಂಧಕರು, ಮೈಸೂರು ರವರು ಸಂಘದ ಸಿಬ್ಬಂಧಿಯಾದ ಕುಮಾರಸ್ವಾಮಿ, ಕಾಳಸ್ವಾಮಿ, ಬಸವರಾಜು ಮತ್ತು ಇನ್ನೊಬ್ಬ ಗುಮಾಸ್ತರ ಮೇಲೆ ದೂರು ದಾಖಲಿಸುವಂತೆ ನನಗೆ ನಿರ್ದೇಶನ ನೀಡಿದ್ದರು. ಅದರಂತೆ ದಿನಾಂಕ 3.11.2011 ರಂದು ಸಹಕಾರ ಸಂಘಗಳ ಸಹಾಯಕ ಉಪನಿಬಂಧಕರು, ಮೈಸೂರು ರವರು ದೂರು ನೀಡಲು ಹೇಳಿರುವ ಅಂಶಗಳ ಆಧಾರದ ಮೇಲೆ ದೂರನ್ನು ತಯಾರಿಸಿ ಹೆಚ್.ಡಿ.ಕೋಟೆ ಪೋಲಿಸ್ ಠಾಣೆಗೆ ನೀಡಿರುತ್ತೇನೆ. 2001-02, 2002-03, 2005-06 ಮತ್ತು 2006-07 ನೇ ಸಾಲಿನಲ್ಲಿ ಪ್ರಭಾರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಹೆಚ್.ವಿ.ಕುಮಾರಸ್ವಾಮಿ ಇವರು ಅರಣ್ಯ ಉತ್ಪನ್ನಗಳಾದ ಜೇನು, ಗೊಂದು ಮತ್ತು ಮರದ ಪಾಚಿಯನ್ನು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರಕ್ಕೆ ಮಾರಾಟ ಮಾಡಿ ಸಂಘಕ್ಕೆ ನಷ್ಟ ಉಂಟು ಮಾಡಿರುತ್ತಾರೆ ಎಂದು ಕಲಂ 64 ರ ವಿಚಾರಣಾ ವರದಿಯಲ್ಲಿ ನಮೂದಿಸಲಾಗಿರುತ್ತದೆ. ಸದರಿ ಸೊಸೈಟಿಯಲ್ಲಿ ಗುಮಾಸ್ತರಾಗಿದ್ದ ನಿಂಗರಾಜು ರವರು 2003-04, 2004-05, 2005-06 ರ ಸಾಲಿನಲ್ಲಿ ಮಾರಾಟ ಗುಮಾಸ್ತರಾಗಿ ಇವರು ಅರಣ್ಯ ಉತ್ಪನ್ನಗಳಾದ ಜೇನು, ಗೊಂದು ಮತ್ತು ಮರದ ಪಾಚಿಯನ್ನು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರಕ್ಕೆ ಮಾರಾಟ ಮಾಡಿ

ಸಂಘಕ್ಕೆ ನಷ್ಟ ಉಂಟು ಮಾಡಿರುತ್ತಾರೆ ಎಂದು ಕಲಂ 64 ರ ವಿಚಾರಣಾ ವರದಿಯಲ್ಲಿ ನಮೂದಿಸಲಾಗಿರುತ್ತದೆ. ಅದೇ ರೀತಿ ಸದರಿ ಸೊಸೈಟಿಯಲ್ಲಿ ಇನ್ನೊಬ್ಬ ಮಾರಾಟ ಗುಮಾಸ್ತರಾಗಿದ್ದ ಕಾಳಸ್ವಾಮಿ ಮತ್ತು ಕಾರ್ಯದರ್ಶಿಯಾಗಿದ್ದ ಬಸವರಾಜು ರವರು ಜಂಟಿಯಾಗಿ 2006-07 ನೇ ಸಾಲಿನಲ್ಲಿ ಅರಣ್ಯ ಉತ್ಪನ್ನಗಳಾದ ಜೇನು, ಗೊಂದು ಮತ್ತು ಮರದ ಪಾಚಿಯನ್ನು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರಕ್ಕೆ ಮಾರಾಟ ಮಾಡಿ ಸಂಘಕ್ಕೆ ನಷ್ಟ ಉಂಟು ಮಾಡಿರುತ್ತಾರೆ ಎಂದು ಕಲಂ 64 ರ ವಿಚಾರಣಾ ವರದಿಯಲ್ಲಿ ನಮೂದಿಸಲಾಗಿರುತ್ತದೆ. ಸದರಿ ವರದಿಯ ಆಧಾರದ ಮೇರೆಗೆ ನಾನು ವಿವರವಾದ ದೂರನ್ನು ತಯಾರಿಸಿ ಪೋಲಿಸ್ ಠಾಣೆಗೆ ನೀಡಿರುತ್ತೇನೆ. ಸಾಕ್ಷಿದಾರರು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ